

ಹೆಬ್ಬಂಡೆಗಳ ನಡುವಿನ ಕೋಟೆ ಬಾಗಿಲು

ಮೆಕೆನ್ಸೀ 25 ಫೆಬ್ರುವರಿ 1792ರಲ್ಲಿ ಬರೆದ 'ಎ ಸ್ಕೆಚ್ ಆಫ್ ದಿ ವಾರ್ ವಿತ್ ಟಿಪ್ಪೂ ಸುಲ್ತಾನ್' ಹೊತ್ತಿಗೆಯಲ್ಲಿವೆ.

ಹುತ್ರಿದುರ್ಗವನ್ನು ಕುರಿತ ಮತ್ತಷ್ಟು ದಿಗ್ಮೂಢಗೊಳಿಸುವ ವಿವರಗಳನ್ನು ಜೇಮ್ಸ್ ಬ್ರಿಸ್ಟೋನ 1793ರಲ್ಲಿ ಹೊರಬಂದ 'ಎ ನರೇಟಿವ್ ಆಫ್ ದಿ ಸಫರಿಂಗ್ಸ್ ಆಫ್ ಜೇಮ್ಸ್ ಬ್ರಿಸ್ಟೋ ಬಿಲಾಂಗಿಂಗ್ ಟು ದಿ ಬೆಂಗಾಲ್ ಆರ್ಟಿಲರಿ, ಡ್ಯೂರಿಂಗ್ ಟೆನ್ ಇಯರ್ಸ್ ಕ್ಯಾಪ್ಟಿವಿಟಿ ವಿತ್ ಹೈದರ್ ಅಲಿ ಅಂಡ್ ಟಿಪ್ಪೂ ಸುಲ್ತಾನ್' ಆತ್ಮಕಥೆಯಲ್ಲಿ ಓದಿದ್ದೆ. ಇದು ಬೆಂಗಾಲ್ ಫಿರಂಗಿ ದಳದ ಜೇಮ್ಸ್ ಬ್ರಿಸ್ಟೋ, ಹೈದರ್ ಅಲಿ ಮತ್ತು ಟಿಪ್ಪೂ ಸುಲ್ತಾನರ ಆಳ್ವಿಕೆಯಲ್ಲಿ ಹತ್ತು ವರ್ಷಗಳು ಸೆರೆಸಿಕ್ಕಿ ಅನುಭವಿಸಿದ ಯಾತನೆಯ ಕಥನವನ್ನು ತಿಳಿಸುವ ಕೃತಿ. ಜೇಮ್ಸ್ ಬ್ರಿಸ್ಟೋ 28 ನವೆಂಬರ್ 1790ರ ರಾತ್ರಿ, ಇತರ ಹನ್ನೊಂದು ಮಂದಿ ಸೆರೆಯಾಳುಗಳ ಜೊತೆಯಲ್ಲಿ ಹುತ್ರಿದುರ್ಗದ ತುತ್ತತುದಿಯ ಕೋಟೆಯ ಒಳಗಿನ ಕಾರಾಗೃಹದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದ. ಈ ಪ್ರಯತ್ನದಲ್ಲಿ ತಪ್ಪಿಸಿಕೊಂಡು ಬದುಕುಳಿದವನು ಜೇಮ್ಸ್ ಬ್ರಿಸ್ಟಲ್ ಒಬ್ಬನೇ!

* * *

ಒಂದು ಮುಂಜಾನೆ, ಬೆಂಗಳೂರಿನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಿಂದ ಬಸ್ಸು ಹಿಡಿದು ಮಾಗಡಿಗೆ ಹೊರಟೆ. ಅಲ್ಲಿಂದ ಅಂಗಲಕೋಟೆ ಹ್ಯಾಂಡ್ ಪೋಸ್ಟ್‌ಗೆ, ಮತ್ತೆ ಅಲ್ಲಿಂದ ಸಂತೆಪೇಟೆಗೆ ಬಂದು ಇಳಿದೆ. ಸಂತೆಪೇಟೆ ಹುತ್ರಿದುರ್ಗದ ಬೆಟ್ಟದ ಬುಡದಲ್ಲಿರುವ ಹಳ್ಳಿ. ಇಲ್ಲಿಂದ ಬೆಟ್ಟದ ಮೇಲಕ್ಕೆ ಹಾವಿನಂತೆ ತಿರುವಿದ ದೀರ್ಘ ರಸ್ತೆಯನ್ನು ಬಿಟ್ಟು, ಹಿಂದೆ ಹಳ್ಳಿಯ ಜನ ಬಳಸುತ್ತಿದ್ದ ಹಳೆಯ ಮೆಟ್ಟಿಲುಗಳ ಹಾದಿಯನ್ನು ಹಿಡಿದೆ. ಏರಿಬೆಳೆದು ನಿಂತ ಗಿಡಮರ ಪೊದೆಗಳ ಹಾದಿ ಹುತ್ರಿದುರ್ಗ ಹಳ್ಳಿಯ ಪ್ರವೇಶದ ಬಳಿ ಇರುವ, 'ಎಲೆಯೂರು ಬಾಗಿಲಿ'ಗೆ ತಲುಪಿಸಿತು. ಎದುರಿಗೆ ಹಳ್ಳಿಯ ಏಕರಸ್ತೆ.



ಶಂಕರೇಶ್ವರ ದೇವಾಲಯದ ಮುಂದೆ 'ದೊಡ್ಡ ದೋಣೆ'

1904ರ 'ಎಪಿಗ್ರಾಫಿಯಾ ಕರ್ನಾಟಿಕಾ'ದ 12ನೇ ಹೊತ್ತಿಗೆಯಲ್ಲಿ 'ಎಲೆಯೂರು ಬಾಗಿಲ ತೊಲೆಗಲ್ಲಿನ ಮೇಲೆ' ಇಸವಿ 1538ರ ಒಂದು ಶಾಸನದ ಉಲ್ಲೇಖವಿದೆ. ಅದು 'ಚೆಂನಮ ನಾಯಕ ಅಯನವರು ಮುತನಯಕ ಶಿಸ್ಯ ಜಂಗಮಯನ ಕೈಯ ಯೆಲಯೂರ ಬಾಗಿಲನು ನಿಜಸ್ತಂಭವಾಗಿ ಗೆಇಸಿದರು' ಎಂದು ಕೆತ್ತಿರುವ ಶಾಸನ. ಅಂದರೆ 'ಚೆನ್ನಮ್ಮ ನಾಯಕ ಅಯ್ಯನವರು, ಮುತ್ತುನಾಯಕರ ಶಿಷ್ಯರಾದ ಜಂಗಮಯ್ಯನವರಿಂದ ಯೆಲಯೂರು ಬಾಗಿಲನ್ನು ಸರಿಯಾದ ಕಂಬಗಳೊಂದಿಗೆ ಕಟ್ಟಿಸಿದರು' ಎಂಬ ಅರ್ಥ. ಕುಸಿದು ಬಿದ್ದಿದ್ದ 'ಎಲೆಯೂರು ಬಾಗಿಲ'ನ್ನು ನವೀಕರಿಸಿದ್ದು, ಈಗ ಈ ಶಾಸನ ಕಾಣುತ್ತಿಲ್ಲ.

ಹಳ್ಳಿಯ ನೇರ ಹಾದಿಯಲ್ಲಿ ನಡೆದು ಬಂದಂತೆ, ರಸ್ತೆಯ ಎಡ ಬದಿಯಲ್ಲಿ 'ಯಂತ್ರದ ಕಲ್ಲು' ಎಂದು ಕರೆಯುವ ಜಾಮಿತಿ ಚಿತ್ರಗಳಿದ್ದ ಕಲ್ಲೊಂದು, ಪೂರ್ಣ ಮಾಸಿ ಹೋದ ವೀರಗಲ್ಲಿನ ಬದಿಗೆ ನಿಂತಿರುವುದು ಕಂಡಿತು. ಇಲ್ಲಿ ಎಡಕ್ಕೆ ತಿರುಗಿದಾಗ, ಮೊದಲಿಗೆ ವೀರಭದ್ರ ಸ್ವಾಮಿಯ ದೇವಾಲಯವಿತ್ತು. ಅದರಾಚೆಗೆ ಅರಳಿ ಮರ, ನಾಗರ ಕಟ್ಟೆ. ಒಂದಿಷ್ಟೇ ಹೆಜ್ಜೆ ಮುಂದೆ ಹಾಕಿದಾಗ ಆದಿನಾರಾಯಣ ಸ್ವಾಮಿಯ ಚಿಕ್ಕ ದೇವಾಲಯ. ಈ ಪುರಾತನ ದೇವಾಲಯಗಳ ಉಲ್ಲೇಖ 1918–19ರ 'ಮೈಸೂರ್ ಆರ್ಕಿಯಾಲೊಜಿಕಲ್ ಸರ್ವೆ ರಿಪೋರ್ಟ್'ನಲ್ಲಿದೆ.

ಆದಿನಾರಾಯಣ ಸ್ವಾಮಿ ದೇವಾಲಯದ ಅರ್ಚಕರಾದ ಶೇಷಾದ್ರಿ ಅವರು, ಈ ದೇವಸ್ಥಾನದಲ್ಲಿ ಪೂಜೆ ಮಾಡುತ್ತಿರುವ ತಮ್ಮ ಮನೆತನದ ಎಂಟನೆಯ ತಲೆಮಾರಿಗೆ ತಾವು ಸೇರಿರುವುದಾಗಿ ತಿಳಿಸಿದರು.

ಗರ್ಭಗುಡಿಯಲ್ಲಿ ಎರಡು ಅಡಿಯ ಕರಿಯ ಕಲ್ಲಿನ ಆದಿನಾರಾಯಣ ವಿಗ್ರಹ. ಎತ್ತರದ ಕಲ್ಲಿನ ಪೀಠದಲ್ಲಿ ಗರುಡನ ಸುಂದರ ಕೆತ್ತನೆ ಇದೆ. ಸುಕನಾಸಿಯಲ್ಲಿ ವಿಷ್ಣುವಿನ ಮತ್ತೊಂದು ವಿಗ್ರಹ ಕಂಡಿತು. ಇದನ್ನು ಆರ್ಕಿಯಾಲೊಜಿಕಲ್ ರಿಪೋರ್ಟ್ 'ಬೆಟ್ಟದ ಮೇಲೆ ಕುಸಿದುಹೋದ ಕೃಷ್ಣನ ದೇವಾಲಯದ್ದು' ಎಂದು ತಿಳಿಸುತ್ತದೆ. ಸುಕನಾಸಿಯಲ್ಲಿ ಆಂಜನೇಯನ ವಿಗ್ರಹವೂ ಇತ್ತು. 'ಅದು ಹಳೆಯ ಗರುಡಗಂಬದಲ್ಲಿತ್ತು', ಅದನ್ನು ಇಲ್ಲಿ ತಂದು ಸ್ಥಾಪಿಸಿರುವುದಾಗಿ ಅರ್ಚಕರು ಹೇಳಿದರು. ಗುಡಿಯ ನವರಂಗದಲ್ಲಿ ನಾಲ್ಕು ಕಂಬಗಳಿವೆ. ಮುಂದಿನ ಕಂಬಗಳಲ್ಲಿ, ಬುದ್ಧನನ್ನೂ ಸೇರಿದಂತೆ ವಿಷ್ಣುವಿನ ಹತ್ತು ಅವತಾರಗಳನ್ನು ಕೆತ್ತಿದ್ದಾರೆ. ಇನ್ನೆರಡು ಹೊರ ಕಂಬಗಳಲ್ಲಿ ಮಹಿಷಾಸುರ ಮರ್ದಿನಿ ಹಾಗೂ ನಟರಾಜನ ಒರಟಾದ ಕೆತ್ತನೆಗಳಿವೆ.

ಗರ್ಭಗುಡಿಗೆ ಎದುರಾಗಿರುವ, ಮುಂದಿನ ಬಲ ಕಂಬದ ಬುಡದಲ್ಲಿ ದಂಪತಿಗಳ ಕೆತ್ತನೆಯೊಂದು ಕಂಡಿತು. 'ಅದು ಈ ದೇವಸ್ಥಾನವನ್ನು ಕಟ್ಟಿಸಿದ ಕೆಂಪಮ್ಮ ಮತ್ತು ನಾಲ್ವಡಿ ಕೆಂಪೇಗೌಡರ ಕೆತ್ತನೆ' ಎಂದು ಪುರೋಹಿತರು ಹೇಳಿದರು. ಅದರ ಕೆಳಗೆ